ನೀರನ್ನು ಒವರ್ ಹೆಡ್ ಟ್ಯಾಂಕ್‌ಗೆ ತೆಗೆದುಕೊಂಡು ಹೋಗುತ್ತಿದ್ದರು ಆದು ಕೆಟ್ಟು ಹೋಗಿ ಜನ ಬಹಳ ತೊಂದರೆಗೆ ಗುರಿಯಾದರು. ಅದನ್ನು ಯಾರು ರಿಪೇರಿ ಮಾಡಬೇಕೆಂದು ವಾದ ನಡೆದು ಈಗ ಸರಿ ಮಾಡಿದ್ದೇವೆ. ಜಿಲ್ಲಾ ಪರಿಷತ್ತು ಇಂಜಿನಿಯರಿಂಗ್ ಡಿವಿಜನ್‌ನವರು ಅವರೇ ಇದನ್ನು ರಿಪೇರಿ ಮಾಡಿ ಎಲೆಕ್ಟ್ರಿಸಿಟಿ ಚಾರ್ಜ್ ಮತ್ತು ಆಪರೇಷನ್ ಚಾರ್ಜಸ್ ಕಟ್ಟಿದ್ದಾರೆ. ಇನ್ನು ಮೂರು ದಿವಸಗಳಲ್ಲಿ ಅಥವಾ ಒಂದು ವಾರದಲ್ಲಿ ಈ ತೊಂದರೆ ಆ ಊರಿನಲ್ಲಿ ಇರುವುದಿಲ್ಲ.

vii) ಕಂಪ್ಟಗಿ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದ ಕೆರೆ ಒಡೆದಂ ರೈತರ ಜಮೀನು ಕೊಚ್ಚಿಹೋಗಿರುವುದಂ.

ಶ್ರೀ ಹನುಮಗೌಡ (ಕುಷ್ಟಗಿ).—ಮಾನ್ಯ ಅಧ್ಯಕ್ಷರೇ, ಕುಷ್ಟಗಿ ತಾಲ್ಲೂಕಿನ ಕೊಡತಗೇರಾ ಹಾಗೂ ಬಳೇಕಲ್ಲ ಗ್ರಾಮದಲ್ಲಿ ಮೊನ್ನೆ ಬಿದ್ದ ಭಾರಿ ಮಳೆಯಿಂದಾಗಿ ಕೊಡತಗೇರಾ ಗೋಕಟ್ಟಿ ಕೆರೆ ಒಡೆದು ಎರಡು ಗ್ರಾಮಗಳಲ್ಲಿ ಸಣ್ಣ ರೈತರ ಜಮೀನು ಕೊಚ್ಚಿ ಹೋಗಿ ಬಿತ್ತಿದ ಬೀಜ, ಗೊಬ್ಬರ ನಾಶವಾಗಿ ರೈತರು ಕಂಗಾಲಾಗಿದ್ದಾರೆ, ಹತ್ತು ಹನ್ನೆರಡಂ ವರ್ಷಗಳ ಭೀಕರ ಬರಗಾಲದಿಂದ ತತ್ತರಿಸಿ ಹೋಗಿದ್ದ ರೈತರು ಆನಾಥರಾಗಿದ್ದಾರೆ. ಇದರಲ್ಲಿ ಎಲ್ಲಾ ಸಣ್ಣ ರೈತರೇ ಇದ್ದಾರೆ. ಮುಂದೆ ಅವರಿಗೆ ಸರ್ಕಾರದಿಂದ ಪರಿಹಾರ ಕೊಟ್ಟು ಜೀವನೋಪಾಯ ಕಲ್ಪಿಸುವಿರೆಂದು ನಾನಂ ಕೆಂದಾಯ ಸಚಿವರನ್ನು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಹಾಗೂ ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ದಿನಾಂಕ ೧೮-೬-೧೯೯೦ರಂದು ಕುಷ್ಟಗಿ ತಾಲ್ಲೂಕಿನಲ್ಲಿ ಉಂಟಾಗಿದ್ದ ಅತೀವೃಷ್ಟಿಯಿಂದಾಗಿ, ಒಂದು ಗೋಕಟ್ಟಿ ಒಡೆದಿದ್ದು, ಮೂರು ಗ್ರಾಮಗಳ ರೈತ ಕುಟುಂಬಗಳು ನಷ್ಟವನ್ನು ಅನುಭವಿಸಿರುತ್ತಾರೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ :—

		ಕೊಡತಗೆರ	ಬಿಳಿಕಲ್ಲು	ರಂಗಾಪುರ
ಅ)	ಹಾನಿಗೊಳಗಾದ ಜಮೀನಿನ ವಿಸ್ತೀರ್ಣ	೯೦ ಎಕರೆ ೩೯ ಗುಂಟೆ	೪೮ ಎಕರೆ ೩೫ ಗುಂಟೆ	೭೧ ಎಕರೆ ೨೦ ಗುಂಟೆ
ಆ)	ಬಿತ್ತನೆ ಬೀಜದ ಹಾನಿ	೧.೨೦ ಲಕ್ಷ ರೂ.	೧.೨೩ ಲಕ್ಷ ರೂ.	೦.೯೭ ಲಕ್ಷ ರೂ.
ಇ)	ಹಾನಿಗೊಳಗಾದ ರೈತ ಕುಟುಂಬಗಳ ಸಂಖ್ಯೆ	೬೭	೩೩	೪೧

ಮೇಲ್ಕಂಡಂತೆ ಹಾನಿಗೊಳಗಾದ ಪ್ರತಿ ಕುಟುಂಬದ ವಾರ್ಷಿಕ ಆದಾಯ, ಅನುಭವಿಸಿರುವ ನಷ್ಟ ಇತ್ಯಾದಿ ಕುರಿತ ವಿವರಗಳನ್ನು ಪಡೆಯಲಾಗುತ್ತಿದ್ದು, ಎಲ್ಲಾ ವಿವರಗಳನ್ನೂ ಕ್ರೋಡೀಕರಿಸಿ, ನಂತರ ನಿಯಮಾವಳಿಗಳ ಪ್ರಕಾರ ಅರ್ಹ ಸಂತ್ರಸ್ತರಿಗೆ ಪರಿಹಾರವನ್ನು ನೀಡುವ ಕ್ರಮವನ್ನು ಜಿಲ್ಲಾಧಿಕಾರಿ, ರಾಯಚೂರು ಇವರು, ಜಿಲ್ಲಾ ಕೃಷಿ ಅಧಿಕಾರಿಯವರ ಜೊತೆ ಚರ್ಚಿಸಿ ಕೈಗೊಳ್ಳುತ್ತಾರೆ. ತ್ವರಿತವಾಗಿ ಪರಿಹಾರವನ್ನು ನೀಡುವ ಕ್ರಮವನ್ನು ಕೈಗೊಳ್ಳಬೇಕಾಗಿ ಜಿಲ್ಲಾಧಿಕಾರಿಯವರಿಗೆ ಈಗಾಗಲೇ ಆದೇಶವನ್ನು ನೀಡಿದೆ.

viii) ಹಾಸನದ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್‌ನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಕೋರ್ಸನ್ನು ಪ್ರಾರಂಭಿಸುವುದು.

ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಹಾಸನದ ಶ್ರೀಮತಿ ಎಲ್.ವಿ. ಪಾಲಿಟೆಕ್ನಿಕ್‌ನಲ್ಲಿ ಮೂರು ವರ್ಷಗಳ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ಕೋರ್ಸನ್ನು ಪ್ರಾರಂಭಿಸಲು ಒಂದಂ ಸ್ಕೀಮ್ ತಯಾರಾಗಿದ್ದು ಇದರ ಬಾಬ್ತು ವಿಶ್ವಬ್ಯಾಂಕಿನಿಂದ ಸುಮಾರು ನಾಲ್ಕು ಕೋಟಿ ರೂಪಾಯಿ ಹಣವೂ ಸಹ ಮಂಜೂರಾಗಿರುವುದಾಗಿ ತಿಳಿಯಿತರ. ಈ ಕೋರ್ಸನ್ನು ನಡೆಸಲು ಬೇಕಾದ ಕಟ್ಟಡದ ಅನುಕೂಲವಿದೆ, ಸಿಬ್ಬಂದಿ ವರ್ಗದವರೂ ಇದ್ದಾರೆ, ಲೇಖನಿ ಮತ್ತು ಇತರೆ ಉಪಕರಣಗಳನ್ನು ಸಹ ಕೊಂಡುಕೊಳ್ಳಲಾಗಿದೆ. ಇನ್ನೇನು ಕೋರ್ಸ್ ಪ್ರಾರಂಭಿಸಬೇಕೆನ್ನುವಾಗ ಟೆಕ್ನಿಕಲ್ ಡೈರೆಕ್ಟರ್‌ವರು ಕೋರ್ಸನ್ನು ಹಿಂತೆಗೆದುಕೊಂಡಿದ್ದು ಈ ಭಾಗದ ವಿದ್ಯಾರ್ಥಿಗಳಿಗೆ ತುಂಬಾ ಅನ್ಯಾಯವಾಗಿದೆ. ಈ ಕೋರ್ಸನ್ನು ತಕ್ಷಣ ಪ್ರಾರಂಭಿಸಬೇಕೆಂದು ಮಾನ್ಯ ವಿದ್ಯಾ ಸಚಿವರ ಗಮನ ಸೆಳೆಯುತ್ತೇನೆ.